**ಅಧ್ಯಕ್ಷರು:-** ಮೃತರ ಗೌರವಾರ್ಥ ಮಾನ್ಯ ಸದಸ್ಯರೆಲ್ಲರೂ ಎದ್ದು ನಿಂತು ಒಂದು ನಿಮಿಷ ಕಾಲ ಮೌನವನ್ನಾಚರಿಸಬೇಕೆಂದು ಕೇಳಿಕೊಳ್ಳುತ್ತೇನೆ.

(ಮೃತರ ಗೌರವಾರ್ಥ ಸದಸನದ ಎಲ್ಲಾ ಸದಸ್ಯರು ಎದ್ದು ನಿಂತು ಒಂದು ನಿಮಿಷ ಮೌನವನ್ನಾಚರಿಸಿದರು)

**ಅಧ್ಯಕ್ಷರು:-** ಈ ಸದನವು ಅಂಗೀಕರಿಸಿದ ಸಂತಾಪ ಸೂಚಕ ನಿರ್ಣಯವನ್ನು ಮೃತರ ಕುಟುಂಬ ವರ್ಗದವರಿಗೆ ಕಳುಹಿಸಿಕೊಡಲಾಗುವುದು.

**ಶ್ರೀ ಸಿದ್ದರಾಮಯ್ಯ:-** ನಾನು ನಿಯಮ ೬೦ರಡಿಯಲ್ಲಿ ನೋಟೀಸ್ ಕೊಟ್ಟಿದ್ದೆ.

**ಅಧ್ಯಕ್ಷರು:-** ಆಮೇಲೆ ತೆಗೆದುಕೊಳ್ಳೋಣ.

**ಶ್ರೀ ಹೆಚ್.ಡಿ. ರೇವಣ್ಣ:-** ನಾನೂ ಒಂದು ನೋಟೀಸ್ ಕೊಟ್ಟಿದ್ದೆ.

**ಅಧ್ಯಕ್ಷರು:-** ಮೊದಲು ಊಟ ಆಗಲಿ. ಆಮೇಲೆ ತೆಗೆದುಕೊಳ್ಳೋಣ.

## ೨. ಪ್ರಕಟಣೆ:

**ವಿಷಯ: ಶ್ರೀ ಬಿ.ಎಸ್.ಯಡಿಯೂರಪ್ಪನವರು ವಿಧಾನಸಭಾ ಸದಸ್ಯತ್ವಕ್ಕೆ ರಾಜೀನಾಮೆ ನೀಡುವ ಬಗ್ಗೆ :–**

**ಅಧ್ಯಕ್ಷರು** :– ೧೩ನೇ ವಿಧಾನಸಭೆಗೆ ಶಿಕಾರಿಪುರ ವಿಧಾನಸಭಾ ಕ್ಷೇತ್ರ ಸಂಖ್ಯೆ ೧೧೫ ರಿಂದ ಚುನಾಯಿತರಾಗಿದ್ದ ಶ್ರೀ ಬಿ.ಎಸ್. ಯಡಿಯೂರಪ್ಪನವರು ತಮ್ಮ ವಿಧಾನಸಭಾ ಸದಸ್ಯತ್ವಕ್ಕೆ ರಾಜಿನಾಮೆಯನ್ನು ದಿನಾಂಕ: ೩೦-೧೧-೨೦೧೨ರಂದು ನೀಡಿದ್ದು ಸದರಿಯವರ ರಾಜೀನಾಮೆಯನ್ನು ತಕ್ಷಣದಿಂದ ಜಾರಿಗೆ ಬರುವಂತೆ ಅಂಗೀಕರಿಸಲಾಗಿದೆ ಎಂದು ಈ ಮೂಲಕ ಸದನಕ್ಕೆ ತಿಳಿಯಪಡಿಸಲಾಗಿದೆ.

**ಅಧ್ಯಕ್ಷರು:-** ಈಗ ಸದನವನ್ನು ಮಧ್ಯಾಹ್ನ ೨-೩೦ ಗಂಟೆಗೆ ಸೇರುವಂತೆ ಮುಂದೂಡಲಾಗಿದೆ.

(ಸದನವು ಮಧ್ಯಾಹ್ನ ೧-೩೪ ಗಂಟೆಗೆ ಮುಕ್ತಾಯವಾಗಿ ಪುನ: ಮಧ್ಯಾಹ್ನ ೨-೩೦ಗಂಟೆಗೆ ಸೇರಲು ನಿಶ್ಚಯಿಸಿತು)